ಕಾಲ ಬಂದಾಗ 'ರೋಗ ತಡೆಗಟ್ಟುವ' ಅಹಿಂಸೆ ಇರಬಹುದು. ಆದರೆ ದೇಶ ದೇಶಗಳ ನಡುವಣ ಯುದ್ಧದಲ್ಲಿ ಅಹಿಂಸೆಯ ಸಾಮರ್ಥ್ಯ ಇನ್ನೂ ಸಾಬೀತಾಗಿಲ್ಲ.'

ಆ ಘಟ್ಟದ ಭಾರತದಲ್ಲಿ ರಾಜಕೀಯದ ಬಗ್ಗೆ ಜೋರಾಗಿ ಮಾತಾಡುವ ವರ್ಗಗಳು ಚೀನಾ ಆಕ್ರಮಣಕ್ಕಿಂತ ಭಾರತದಲ್ಲಿನ ಎಡ ಮತ್ತು ಬಲ ಪಕ್ಷಗಳ ನಡುವಣ ಜಗಳವನ್ನೇ ಹೆಚ್ಚು ಮುಖ್ಯವೆಂದು ಕಾಣುತ್ತಿದ್ದುದನ್ನು ಲೋಹಿಯಾ ಗಮನಿಸಿದರು. ಸಮಾಜವಾದಿ ಪಕ್ಷ ಹಾಗೂ ಕಮ್ಯುನಿಸ್ಟ್ ಪಕ್ಷಗಳ ನಡುವೆ ತಾತ್ವಿಕ ಭಿನ್ನಾಭಿಪ್ರಾಯ, ಜಗಳಗಳು ಆರಂಭದಿಂದಲೂ ಇದ್ದವು. 1962ರ ಹೊತ್ತಿಗೆ ಕಮ್ಯುನಿಸ್ಟ್ ಚೀನಾದ ತಂತ್ರಗಳನ್ನು ಲೋಹಿಯಾ ನೇರವಾಗಿ, ಬಹಿರಂಗವಾಗಿ ವಿಶ್ಲೇಷಿಸತೊಡಗಿದರು. ಈ ಕಾರಣದಿಂದ ಕೂಡ ಆ ಕಾಲದಲ್ಲಿ ಹಾಗೂ ನಂತರದಲ್ಲಿ ಕೆಲವು ಕಮ್ಯುನಿಸ್ಟ್ ಬಣಗಳು ಲೋಹಿಯಾರನ್ನು ದ್ವೇಷಿಸಲು ಶುರು ಮಾಡಿದಂತೆ ಕಾಣುತ್ತದೆ.

***

ಭಾರತದ ಗಡಿ ಬಿಕ್ಕಟ್ಟಿನ ಸಂದರ್ಭದಲ್ಲಿ ಬ್ರಿಟಿಷ್ ಪ್ರಧಾನಿ ಮ್ಯಾಕ್‌ಮಿಲನ್ ಹಾಗೂ ಅಮೆರಿಕದ ಅಧ್ಯಕ್ಷ ಕೆನಡಿ ಇಬ್ಬರೂ ಭಾರತಕ್ಕೆ ಬೆಂಬಲ ಘೋಷಿಸಿದರು. ಆಗ ಬೆಂಗಳೂರಿನಲ್ಲಿದ್ದ ಲೋಹಿಯಾ ಈ ಬೆಂಬಲವನ್ನು ಸ್ವಾಗತಿಸಿದರು. ಅವತ್ತು ಅಂತರರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಕೊಟ್ಟ ಹೇಳಿಕೆಯಲ್ಲಿ ಲೋಹಿಯಾ ಸ್ವ–ವಿಮರ್ಶೆಯ ಪ್ರಶ್ನೆಗಳನ್ನೂ ಎತ್ತಿದ್ದರು:

ನಾವು, ಭಾರತದ ಜನರು, ಗಂಭೀರವಾಗಿದ್ದೇವೆಯೇ?

ಅಲಿಪ್ತ ನೀತಿ ಎಂದರೇನು ಎಂಬುದನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದೇವೆಯೆ?

ಚೀನಾದ ವಿಪತ್ತನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದೇವೆಯೆ?

ಇದೇ ಪತ್ರಿಕಾಗೋಷ್ಠಿಯಲ್ಲಿ ಲೋಹಿಯಾ ಹೇಳಿದ ಮಾತು:

'ನಮ್ಮ ಗಡಿಗಳನ್ನು ಉಲ್ಲಂಘಿಸುವವರಿಗೆ ಪ್ರತಿರೋಧ ಒಡ್ಡುವ ಮಾರ್ಗ ತೋರಿಸದ 'ಅಹಿಂಸೆ'ಯಿಂದ ಪ್ರಯೋಜನವೇನು? ಒಂದು ದೇಶ ಸಶಸ್ತ್ರ ಸೇನೆಯನ್ನು ಇಟ್ಟುಕೊಂಡು, ಅದನ್ನು ಬಳಸುತ್ತಲೂ ಇರುವಾಗ, ತನ್ನ ದೇಶದ ಗಡಿಗಳಿಗೆ, ಪ್ರಾಂತಗಳಿಗೆ ಅಪಾಯ ಒದಗಿದಾಗ ಎಲ್ಲಿಂದ ಸಾಧ್ಯವೋ ಅಂಥ ಎಲ್ಲ ಕಡೆಗಳಿಂದಲೂ ಎಲ್ಲ ಬಗೆಯ ಸೇನಾ ನೆರವನ್ನೂ ಪಡೆಯಬೇಕು.'

1963ರಲ್ಲಿ 'ಹಿಮಾಲಯ ಉಳಿಸಿ' ಎಂಬ ಘೋಷವಾಕ್ಯವನ್ನು ಲೋಹಿಯಾ ರೂಪಿಸಿದರು. ಚೀನಾ ದುರಾಕ್ರಮಣದ ಕಾಲದಲ್ಲಿ ದೇಶದ ಜನ ಒಂದಾಗಿ ಇನ್ನಷ್ಟು ಪ್ರಬಲವಾದ ದನಿಯೆಬ್ಬಿಸದೆ ಇರಲು ಕಾರಣವೇನು ಎಂಬುದರ ಬಗೆಗೆ ಆಳವಾಗಿ ಯೋಚಿಸಿ ಹೇಳಿದರು:

'ದೇಶದಲ್ಲಿರುವ ಅಸಮಾನತೆಯ ಗೋಡೆಗಳನ್ನು ಹಾಗೇ ಉಳಿಸಿಕೊಂಡು ಚೀನಾದ ಸವಾಲನ್ನು ಎದುರಿಸುವುದು ಕಷ್ಟ. ನಾವು ಚೀನಾವನ್ನು ಸೋಲಿಸಬೇಕೆಂದರೆ, ಎಲ್ಲ ಬಗೆಯ ಅಸಮಾನತೆಯನ್ನು ಹೊಡೆದೋಡಿಸಬೇಕು. ನಮ್ಮ ಮನಸ್ಸನ್ನು ಗಟ್ಟಿಯಾಗಿಸಿಕೊಳ್ಳಬೇಕು ಆರೋಗ್ಯಕರವಾಗಿಸಿಕೊಳ್ಳಬೇಕು.'

ಲೋಹಿಯಾ ಮಾತುಗಳನ್ನು ಇವತ್ತು ಮತ್ತೆ ಕೇಳಿಸಿಕೊಳ್ಳುತ್ತಿದ್ದರೆ, 'ಟುಗೆದರ್, ವಿ ಸ್ಟ್ಯಾಂಡ್; ಡಿವೈಡೆಡ್, ವಿ ಫಾಲ್' ಎಂಬ ಇಂಗ್ಲಿಷ್‌ನ ಪ್ರಖ್ಯಾತ ನಾಣ್ಣುಡಿ ನೆನಪಾಗುತ್ತದೆ. 'ನಾವು ಒಟ್ಟಾಗಿದ್ದರೆ ಎದ್ದು ನಿಲ್ಲುವೆವು; ಒಡೆದು ಹೋದರೆ ಬೀಳುವೆವು' ಎನ್ನುತ್ತದೆ ಈ ನಾಣ್ಣುಡಿ. ದೇಶದ ಜನ ಜಾತಿ, ಮತ, ಧರ್ಮಗಳ ಆಧಾರದ ಮೇಲೆ ಒಡೆದು ಹೋದರೆ ದೇಶ ಒಟ್ಟಾಗಿ ಹೋರಾಡಲಾರದು ಎಂಬ ಲೋಹಿಯಾರ ದಾರ್ಶನಿಕ ಸತ್ಯ ಮತ್ತು ಮುನ್ನೋಟ ಇಪ್ಪತ್ತೊಂದನೆಯ ಶತಮಾನದಲ್ಲೂ ದಾರಿದೀಪದಂತಿದೆ. ಆಳುವ ಸರ್ಕಾರಗಳು, ಜನರು, ಪತ್ರಿಕೆಗಳು ಲೋಹಿಯಾರಂಥ ಮುನ್ನೋಟದ ಚಿಂತಕರನ್ನು ಅರ್ಥ ಮಾಡಿಕೊಳ್ಳದೇ ಹೋದದ್ದರಿಂದ ದೇಶಕ್ಕೆ ದೊಡ್ಡ ನಷ್ಟವಾಯಿತು.

***

'ಒಟ್ಟಾಗಿದ್ದರೆ ಎದ್ದು ನಿಲ್ಲುವೆವು; ಒಡೆದು ಹೋದರೆ ಬೀಳುವೆವು' ಎಂಬ ನಾಣ್ಣುಡಿಯ ಅರಿವು ರಾಜಕೀಯ ಸಂಘಟನೆಗಳಿಗೂ ಅನ್ವಯವಾಗುತ್ತದೆ! ಈ ಸವಾಲು ಲೋಹಿಯಾರ ರಾಜಕೀಯ ಜೀವನದಲ್ಲೂ ಎದುರಾಯಿತು. ಪ್ರತಿ ಚುನಾವಣೆಯ ಸಂದರ್ಭದಲ್ಲೂ ಈ ಸತ್ಯ ಎರಡೂ ಸಮಾಜವಾದಿ ಪಕ್ಷಗಳಿಗೂ ಗೊತ್ತಿರುತ್ತಿತ್ತು; ಆದರೆ ಸೋತಾಗ ಈ ಸತ್ಯ ಹೆಚ್ಚು ಅರಿವಿಗೆ ಬರುತ್ತಿತ್ತು!

1962ರ ಚುನಾವಣೆಯ ನಂತರ, 'ಈ ಬಗೆಯ ಏಕತೆಯನ್ನು ಉಳಿದವರು ಸೇರಿ ಮಾಡಿ' ಎಂದ ಲೋಹಿಯಾ, ಅದಕ್ಕೆ ಕೊಟ್ಟ ಕಾರಣಗಳನ್ನು ಮಧು ಲಿಮಯೆ ದಾಖಲಿಸುತ್ತಾರೆ:

'ನನ್ನಿಂದಾಗಿ ಏಕತೆಯ ಮಾತುಕತೆಗಳು ಮುರಿದುಬಿದ್ದವು ಎಂದು ಜನ ನನ್ನನ್ನು ಬಯ್ಯುತ್ತಾರೆ. ನಾನು ಈ ವಯಸ್ಸಿನಲ್ಲಿ ಜನರ ಜೊತೆ ಜಗಳ ಆಡಲಾರೆ. ಕೆಲ ಬಗೆಯ ಜನ ಒಟ್ಟಾಗಿ ಸೇರಿದಾಗ ಚರ್ಚೆ ನಡೆಯುತ್ತದೆ; ಬಿಸಿಬಿಸಿ ವಾಗ್ವಾದ ನಡೆಯುತ್ತದೆ. ಚರ್ಚೆ ಕಹಿಯಾಗತೊಡಗುತ್ತದೆ. ಈಗ ನಾನು ಇದನ್ನೆಲ್ಲ ಮಾಡಲಾರೆ. ನೀವೇ ಇದನ್ನೆಲ್ಲ ಕೈಗೆತ್ತಿಕೊಳ್ಳಬೇಕು.

'ಎರಡನೆಯ ಕಾರಣ: ನಾನು ಹೊಂದಾಣಿಕೆ ಮಾಡಿಕೊಳ್ಳುವ ಶಕ್ತಿಯುಳ್ಳವನಲ್ಲ. ಈ ಕೊಡುವ–ಪಡೆಯುವ ವಿಚಾರದಲ್ಲಿ ಎಷ್ಟೋ ವರ್ಷಗಳಿಂದ, ಅಷ್ಟೇ ಯಾಕೆ ಎಷ್ಟೋ ಶತಮಾನಗಳಿಂದ ಬಂದಿರುವ, ನನಗೆ ಸರಿ ಎನ್ನಿಸಿರುವ, ವಿಚಾರಗಳಿವೆ; 'ಇವು ಸರಿಯಲ್ಲ' ಎಂದು ನೀವು ಹೇಳಿದರೆ ಅಂಥ ಮಾತುಕತೆಗಳಿಂದ ಏನೂ ಪ್ರಯೋಜನವಿಲ್ಲ. ಇಂಥದನ್ನು ನಾನು ಸಹಿಸಿಕೊಳ್ಳುವುದಿಲ್ಲ. ಈಗ ನಾನು ಇದನ್ನೆಲ್ಲ ಮಾಡಲಾರೆ. ಹೀಗೆ ಕೊಡುವ–ಪಡೆಯುವ ಕೆಲಸವನ್ನು ತೋರುಗಾಣಿಕೆಗಾದರೂ ಮಾಡಬಲ್ಲವರು ಇಂಥ ಚರ್ಚೆ ಮಾಡುವುದು ಒಳ್ಳೆಯದು. ಕೊಡುವ, ಪಡೆಯುವ ಕೆಲಸದಲ್ಲೂ ಹಗ್ಗಜಗ್ಗಾಟವಿರಬಹುದು; ಕಾವೇರಿದ ಜಗಳಗಳಾಗಬಹುದು. ಆದರೆ ಕೊನೆಗೆ ಏನಾದರೂ ಫಲ ಸಿಕ್ಕುವಂತಿರಬೇಕು. ನನ್ನಂಥವನು ಇದನ್ನೆಲ್ಲ ಮಾಡಲಾರ.'

'ಮೂರನೆಯ ಕಾರಣ, ನಾನು ನನ್ನ ಶಕ್ತಿ ಮೀರಿ ಮೃದುವಾದರೂ ಜನ 'ಈತ ತನಗೆ ಬೇಕಾದಂತೆಯೇ ಮಾಡುವವನು' ಎಂದು ಸುಮ್ಮನೆ ಅಭ್ಯಾಸ ಬಲದಿಂದ ಹೇಳುತ್ತಿರುತ್ತಾರೆ.'

'ಸಂಘಟನೆಯನ್ನು ರೂಪಿಸುವ ಕಾರ್ಯಕೌಶಲ ಬೇರೆ ಥರದ್ದು. ತಮ್ಮಲ್ಲಿ ಅಂಥ ಕೌಶಲವೂ ಇಲ್ಲ; ಅಂಥ ಕೆಲಸದಲ್ಲಿ ಆಸಕ್ತಿಯೂ ಇಲ್ಲವೆಂದು ಲೋಹಿಯಾಗೆ ಅನ್ನಿಸುತ್ತಿತ್ತು' ಎಂಬುದನ್ನು ನೆನೆಯುತ್ತಾ ಮಧು ಲಿಮಯೆ ಬರೆಯುತ್ತಾರೆ:

'ಲೋಹಿಯಾ ಒಂದು ಘಟ್ಟದಲ್ಲಿ 'ಪರಿಮಾಣಭೇದ'ದ ಮಾತಾಡುತ್ತಿದ್ದರು. 'ಪರಿಮಾಣಭೇದ' ಅಂದರೆ, ದೊಡ್ಡ ಕಾರ್ಯ ಒಂದನ್ನು ಸಾಧಿಸುವಾಗ ಸಣ್ಣಪುಟ್ಟ ದೋಷಗಳನ್ನು ಗಮನಿಸದಿರುವುದು. 'ಪರಿಮಾಣಭೇದ' ಅತ್ಯಗತ್ಯ ಎಂದು ಲೋಹಿಯಾಗೆ ಅನ್ನಿಸುತ್ತಿತ್ತು. ಆದರೆ ಅನೇಕ ಸಲ ಅದನ್ನು ಸಾಧಿಸಲು ಅವರಿಗೇ ಸಾಧ್ಯವಾಗುತ್ತಿರಲಿಲ್ಲ. 'ನನ್ನಲ್ಲಿ ಪರಿಮಾಣಭೇದದ ಗುಣವಿದ್ದಿದ್ದರೆ ಜನರ ಲೋಪದೋಷಗಳನ್ನು ನಾನು ನುಂಗಿಕೊಳ್ಳಬಹುದಿತ್ತು' ಎಂದು ಲೋಹಿಯಾ ಹೇಳುತ್ತಿದ್ದರು.'

'ಏಕತೆಯ ವಿಚಾರದಲ್ಲಿ ಲೋಹಿಯಾಗಿಂತ ಜೆ.ಪಿ. ಯಶಸ್ವಿಯಾಗಬಲ್ಲವರಾಗಿದ್ದರು' ಎನ್ನುವ ಮಧು ಲಿಮಯೆ ವಿಷಾದದಿಂದ ಬರೆಯುತ್ತಾರೆ:

'ಮಹಾತ್ಮಗಾಂಧಿ ದೇಶದ ಹಿತದೃಷ್ಟಿಯಿಂದ ನೆಹರು–ಪಟೇಲ್ ಎಂಬ ಎರಡು ಕುದುರೆಗಳನ್ನು ಯಶಸ್ವಿಯಾಗಿ ಹೂಡಿದ್ದರು. ವಿಷಾದವೆಂದರೆ, ಸಮಾಜವಾದಿ ಚಳುವಳಿಯಲ್ಲಿ ಸಮಾಜ ಪರಿವರ್ತನೆಗೆ ಜೆ.ಪಿ.–ಲೋಹಿಯಾ ಅವರಂಥ ಎತ್ತುಗಳನ್ನು ಹೂಡುವಂಥ ಗಾಂಧಿಯೊಬ್ಬರು ಇರಲಿಲ್ಲ.'

ಲೋಹಿಯಾರ ನಾಯಕತ್ವದ ಕಲ್ಪನೆ ಉಳಿದವರಿಗಿಂತ ಭಿನ್ನವಾಗಿತ್ತು ಎಂಬುದು ಮಧು ಲಿಮಯೆಗೆ ಗೊತ್ತಿತ್ತು: 'ಲೋಹಿಯಾ ದೃಷ್ಟಿಯಲ್ಲಿ ನಾಯಕನೆಂದರೆ ಈಗ ರೂಢಿಯಲ್ಲಿರುವ ಅಭಿಪ್ರಾಯಕ್ಕೆ ಸೈ ಎನ್ನುವವನಲ್ಲ. ರೂಢಿಯಲ್ಲಿರಲಿ, ಇಲ್ಲದಿರಲಿ, ಸರಿಯಾದ ವಿಚಾರವನ್ನು ಜನರಿಗೆ ಮನವರಿಕೆ ಮಾಡಿಕೊಡಲು ನಿಷ್ಠುರ ಮಾರ್ಗವನ್ನು ಕೈಗೆತ್ತಿಕೊಳ್ಳುವಂಥವನು. ಮೂಲಭೂತ ವಿಚಾರಗಳು ಹಾಗೂ ಸಿದ್ಧಾಂತಗಳ ವಿಚಾರದಲ್ಲಿ ನಾಯಕ ಅಚಲನೂ, ದೃಢಚಿತ್ತನೂ ಆಗಿರಬೇಕು ಎಂಬುದು ಲೋಹಿಯಾ ನಿಲುವಾಗಿತ್ತು.'

ಚುನಾವಣೆಯ ಸೋಲಿನ ನಂತರವೂ ಸಮಾಜವಾದಿ ಪಕ್ಷಗಳ ಏಕತೆಯ ಚರ್ಚೆಗಳು ತೆವಳುತ್ತಿದ್ದವು! 1963ರ ಜನವರಿಯಲ್ಲಿ ಫರೂಖಾಬಾದ್ ಲೋಕಸಭಾ ಸದಸ್ಯ ಮೂಲಚಂದ್ ದುಬೆ ನಿಧನರಾದರು. ಸಮಾಜವಾದಿ ನಾಯಕ ಅರ್ಜುನ್‌ಸಿಂಗ್ ಬದೋರಿಯಾ ಫರೂಖಾಬಾದ್ ಲೋಕಸಭಾ ಕ್ಷೇತ್ರದುದ್ದಕ್ಕೂ ಓಡಾಡಿ ಅಧ್ಯಯನ ಮಾಡಿ, ಹೊಸ ಸಲಹೆಯೊಂದನ್ನು ಪಕ್ಷದ ಮುಂದಿಟ್ಟರು.

(ಸಶೇಷ)